ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 65/2022

| | | |
|---|---|---|
| ಹೆಸರು | - | ಗುರು |
| ತಂದೆಯ ಹೆಸರು | - | ರಮೇಶ ಖಾರ್ವಿ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಮೀನುಗಾರಿಕೆ |
| ವಾಸ್ತವ್ಯ | - | ಮಧ್ಯಖಾರ್ವಿವಾಡಾ , ಬೆಳಂಬಾರ , ಅಂಕೋಲಾ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 2 - ಶ್ರೀ ಚೇತನ ಗೋವಿಂದ ನಾಯಕ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಮತ್ತು ಅವರು ಹಲವಾರು ವರ್ಷಗಳಿಂದ ಪರಸ್ಪರ ಪರಿಚಯಸ್ತರಾಗಿದ್ದು , ನೀವು ಅವರ ಹತ್ತಿರ ನಿಮ್ಮ ವ್ಯವಹಾರಕ್ಕಾಗಿ ನಿಮಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿ ಸದರ ಹಣವನ್ನು 2-3 ತಿಂಗಳೊಳಗೆ ಅವರಿಗೆ ಹಿಂತಿರುಗಿಸುತ್ತೇನೆ ಎಂದು ಹೇಳಿದ್ದಕ್ಕೆ , ಅವರು ಒಪ್ಪಿ ದಿಃ 10-09-2020 ರಂದು ರೂ. 3,00,000/- ವನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 3** ಪಿಡಬ್ಲ್ಯೂ 2 - ಇವರು ಮುಂದುವರಿದು, ಹೀಗೆ ಪರಿಪರಿಯಾಗಿ ಸದರ ರೂ . 3,00,000/- ಹಣವನ್ನು ಹಿಂತಿರುಗಿಸಲು ನಿಮ್ಮ ಹತ್ತಿರ ಕೇಳಿದಾಗ ನೀವು ತನ್ನಲ್ಲಿ ಈಗ ನಗದು ಇರುವುದಿಲ್ಲ ಎಂದು ಹೇಳಿ ಸಿಂಡಿಕೇಟ್ ಬ್ಯಾಂಕ (ಈಗಿನ ಕೆನರಾ ಬ್ಯಾಂಕ)

ಅಂಕೋಲಾ ಶಾಖೆಯ ಚೆಕ್ ನಂ. 279618 ನೇದನ್ನು ನೀಡಿ ಸ್ದ್ರಿ ಖಾತೆಯಲ್ಲಿ ಸಾಕಷ್ಟು ಹಣವಿದೆ ನಗದೀಕರಿಸಿಕೊಳ್ಳಿ ಎಂದು ಹೇಳಿ ದಿಃ 29-06-2021 ಎಂತಾ ನಮೂದಿಸಿ ಅವರಿಗೆ ಕೊಟ್ಟಿದ್ದು ಇರುತ್ತದೆ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ- 4** ಪಿಡಬ್ಲ್ಯೂ 2 – ಇವರು ಮುಂದುವರಿದು, ಅದರಂತೆ ಚೆಕ್ ನಲ್ಲಿದ್ದ ಹಣ ರೂ. 3,00,000/- ನ್ನು ಪಡೆಯಲು ನೀವು ಹೇಳಿದಂತೆ ಅವರು ನೀವು ಕೊಟ್ಟ ಚೆಕ್ ನ್ನು ನಗದೀಕರಿಸುವ ಸಲುವಾಗಿ ಆಯ್ ಸಿ ಆಯ್ ಸಿ ಆಯ್ ಬ್ಯಾಂಕ , ಕುಮಟಾ ಶಾಖೆಗೆ ಹಾಜರು ಪಡಿಸಿದ್ದು , ಸ್ದ್ರಿ ಚೆಕ್ ನಲ್ಲಿ ಸಾಕಷ್ಟು ಹಣವಿಲ್ಲ ಎಂತಾ ಫಂಡ್ಸ ಇನ್ ಸಫಿಶಿಯಂಟ್ ಎಂಬ ಶರಾದೊಂದಿಗೆ ದಿಃ 30-06-2021 ರಂದು ಹಿಂದುಗಿಸಲ್ಪಟ್ಟಿದ್ದು ಇರುತ್ತದೆ ಹಾಗೂ ಈ ರೀತಿ ನಿಮ್ಮಿಂದ ಸಂದಾಯವಾಗತಕ್ಕ ಹಣ ಸಂದಾಯವಾಗದೇ ಹಾಗೆಯೇ ಉಳಿದಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ- 5** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ಕುರಿತು ಅವರು ತಮ್ಮ ವಕೀಲರ ಮೂಲಕ ದಿಃ 17-07-2021 ರಂದು ನಿಮ್ಮ ಖಾಯಂ ವಿಳಾಸಕ್ಕೆ ನೋಟಿಸ್ ನೀಡಿ ಸದರ ನೋಟಿಸ್ ಮುಟ್ಟಿದ್ದ 15 ದಿನಗಳೊಳಗೆ ಈ ಮೇಲೆ ವಿವರಿಸಿದ ಚೆಕ್ ರಕಂ ರೂ . 3,00,000/- ವನ್ನು ವಸೂಲು ಕೊಡುವಂತೆ ಮಾಗಣಿ ಮಾಡಿ ಕಳುಹಿಸಿದ ನೋಟಿಸನ್ನು ನೀವು ಬುದ್ಯಾ ತಿರಸ್ಕರಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ- 6** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ಕುರಿತು ದಿಃ 17-07-2021 ರಂದು ನಿಮಗೆ ಕಳಿಸಿದ ನೋಟಿಸ್ ನೀವು ಸ್ವೀಕರಿಸದೇ ಇರುವ ಕುರಿತು ನಮೂದಿಸಿದ್ದು ದಿಃ 28-07-2021 ರಂದು ವಾಪಸ್ ಬಂದಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 7</u>** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ರೀತಿ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಅವರಿಗೆ ಬುಧ್ಯಾ ಮೋಸ ಹಾಗೂ ವಂಚನೆ ಮಾಡುವ ಉದ್ದೇಶದಿಂದ ಬೋಗಸ್ ಚೆಕ್ ನೀಡಿ ಎನ್ ಆಯ್ ಆಕ್ಟ ಕಲಂ 138 ರವ್ವಯ ಶಿಕ್ಷಾರ್ಹ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 8</u>** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

<u>ಉತ್ತರ –</u>

**<u>ಪ್ರಶ್ನೆ – 9</u>** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

<u>ಉತ್ತರ –</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ದಿಃ 14-05-2026. ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ